ಜಿಲ್ಲಾ ಪಂಚಾಯಿತಿಯು ಸದರಿ ಗ್ರಾಮದಲ್ಲಿ ಪ್ರೌಢಶಾಲಾ ಕಟ್ಟಡ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳುತ್ತಿದೆ.

ಇ) ಉತ್ತರ ಮೇಲಿನಂತೆ

ಉತ್ತರ ಕನ್ನಡಜಿಲ್ಲೆಯಲ್ಲಿ ಅರಣ್ಯ ಭೂಮಿಯ ಪಂಚಿಕೆ

513 - ಶ್ರೀ ಆರ್.ಎನ್. ನಾಯ್ಕ (ಭಟ್ಕಳ): ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಭೂಮಿ ಅತಿಕ್ರಮಿಸಿ ಮಂಜೂರಾತಿಗೆ ವಿನಂತಿಸಿ ಇಮವರೆಗೆ ಬಂದಿರುವ ಅರ್ಜಿಗಳೆಷ್ಟು?*

ಆ) *ಎಷ್ಟು ಅರ್ಜಿಗಳನ್ನು ಮಂಜೂರಾತಿಗಾಗಿ ಶಿಫಾರಸ್ಸು ಮಾಡಿದೆ?*

ಇ) *ಭಟ್ಕಳ್ ತಾಲ್ಲೂಕು ಹೆಬಳೆ ಗ್ರಾಮದಲ್ಲಿ ಸರ್ವೆ ನಂ. 214 ಎ ಹಿಸ್ಸಾ ನಂ. 1 ಎರಲ್ಲಿ ಯಾರ್ಯಾರು ಎಷ್ಟೆಷ್ಟು ಅತಿಕ್ರಮಣ ಮಾಡಿದ್ದಾರೆ?*

ಈ) *ಈ ಭೂಮಿ ಅತಿಕ್ರಮಣ ಮಾಡಿದವರ ಪೈಕಿ ಒಬ್ಬರಿಗೆ ಹೆಬಳೆ ಗ್ರಾಮ ಮ್ಯುಟೇಷನ್ ಎಂಟ್ರಿ ನಂ. 4237 ರ ಪ್ರಕಾರ 5.00 ಎಕರೆ ಜಮೀನು ಇದ್ದು ಆ ಪೈಕಿ 3.00 ಎಕರೆ ಈಗಾಗಲೇ ಅರಣ್ಯ ಭೂಮಿ ಮಂಜೂರಾತಿಯನ್ನು ಅರಣ್ಯ ಅಧಿಕಾರಿಗಳು ಅಭ್ಯಸಿಸಿದ್ದಾರೆಯೇ?*

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):

ಅ) 1978ಕ್ಕಿಂತ ಪೂರ್ವದಲ್ಲಿ ಆದ ಅರಣ್ಯ ಅತಿಕ್ರಮಣಕ್ಕೆ ಸಂಬಂಧಿಸಿ ಬಂದಿರುವ ಅರ್ಜಿಗಳ ಸಂಖ್ಯೆ: 4590

ಆ) 1978ರ ಪೂರ್ವದಲ್ಲಿ ಆಗಿರುವಂತಹ ಪ್ರಕರಣಗಳೆಂದು ಖಾತರಿ ಪಡಿಸಿಕೊಂಡು ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯಲು ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುತ್ತಿದೆ. ಇಂಥ ಪ್ರಕರಣಗಳನ್ನು ಪರಿಶೀಲಿಸಲು ಸರ್ಕಾರದ ಆದೇಶ ಸಂಖ್ಯೆ : ಎಪೆಚ್‌ಎಫ್‌ಎಫ್ 5 ಎಫ್ಬಿಎಲ್ 90 ಭಾಗ -2) ದಿನಾಂಕ: 10-10-91ರಲ್ಲಿ ಮಾರ್ಗಸೂಚಿ ಹೊರಡಿಸಲಾಗಿದೆ.

ಇ) ಒಟ್ಟು 6 ಜನಗಳು ಅರಣ್ಯ ಜಮೀನನ್ನು ಅತಿಕ್ರಮಣ ಮಾಡಿರುತ್ತಾರೆ. ವಿವರ ಕೆಳಕಂಡಂತೆ ಇರುತ್ತದೆ.

1)	ಶ್ರೀಮತಿ ಜುಟ್ಟಮ್ಮ ಕೋಂ ಮದೇವನಾಯ್ಕ	1.28 ಎಕರೆ
2)	ಶ್ರೀ ಬಾಬುನಾಗಪ್ಪ ಹೆಬಳೆ	1.35 ಎಕರೆ
3)	ಶ್ರೀಮತಿ ಸರೋಜಿನಿ ಕೋಂ ಗಣಪತಿ ಮೊಗೆರಾ	2.35 ಎಕರೆ
4)	ಶ್ರೀ ಟಿ.ಡಿ. ಪ್ರಭು	1.18 ಎಕರೆ
5)	ಶ್ರೀ ಪುಂಡಲೀಕನಾಗಪ್ಪ ಹೆಬಳೆ	0.19 ಎಕರೆ
6)	ಹುಲಿಯಾ ಕೋಂ ಫೊರೂಕ್ ಸಾಬ್	0.02 ಎಕರೆ

ಈ) ಸದರಿ ಪ್ರದೇಶದಲ್ಲಿ ಅರಣ್ಯ ಅಧಿಕಾರಿಗಳು ಭೂಮಿ ಮಂಜೂರು ಮಾಡಿರುವುದಿಲ್ಲ. ಆದರೆ ಹೆಬಳೆ ಅರಣ್ಯ ಸರ್ವೆ ನಂ. 214 ಎ 3 ರಲ್ಲಿ ನಾಗಪ್ಪ ಈರಪ್ಪ ಜಾನ್ ಮನೆ ಇವರ ಹೆಸರಿಗೆ ಜಿಲ್ಲಾಧಿಕಾರಿ ಉತ್ತರ ಕನ್ನಡ ಕಾರವಾರವರ ಆದೇಶ ಸಂಖ್ಯೆ: ಎಫ್ಒಆರ್.ಟಿಆರ್ 6799 ದಿನಾಂಕ: 14-03-1963ರಂತೆ ಪಂಗಾಮಿ ಲಾಗಣಿಯಾಗಿ ಮಂಜೂರು ನೀಡಿದೆ. ಸದರಿಯವರು 3.00 ಎಕರೆ ಭೂಮಿಯನ್ನು ನಿಗದಿಪಡಿಸಿದ ಷರತ್ತಿನಂತೆ ಸಾಗುವಳಿ ಮಾಡಿರುವುದರಿಂದ ನಿರ್ವಣಿಕರಿಸಿ ಜಿಲ್ಲಾಧಿಕಾರಿ ಉತ್ತರ ಕನ್ನಡ ಕಾರವಾರ ಇವರ ಆದೇಶ ಸಂಖ್ಯೆ: [illegible]

189:80-81 ದಿನಾಂಕ 19-06-1980ರ ಪ್ರಕಾರ ಹಂಚಿಕೆ ಮಾಡಿರುತ್ತಾರೆ. ಈಗ ನಾಗಪ್ಪ ಈರಪ್ಪ ಜಾನ್ಯಾ ಇವರು 23-2-1981ರಂದು ಮೃತಪಟ್ಟಿರುವುದರಿಂದ ಅವರ ಯಾವತ್ತು ಆಸ್ತಿಗೆ ಸದರಿಯವರ ಹಿರಿಯ ಮಗ ಪುಂಡಲಿಕ ನಾಗಪ್ಪ ಹೆಬಳೆಯವರ ಹೆಸರಿಗೆ ಮ್ಯುಟೇಷನ್ ಎಂಟ್ರಿ ಕ್ರಮ ಸಂಖ್ಯೆ: 4237ರ ಪ್ರಕಾರ ನೊಂದಾಯಿಸಿರುವುದಾಗಿ ಜಿಲ್ಲಾಧಿಕಾರಿ ಉತ್ತರ ಕನ್ನಡ ಕಾರವಾರರವರ ಪತ್ರ ಸಂಖ್ಯೆ: ಎಲ್‌ಎನ್ಡಿ. ಇಎಸ್‌ಆರ್ 1-189:83-84 ದಿನಾಂಕ: 20-12-1983ರಂದು ಆದೇಶ ಹೊರಡಿಸಿರುತ್ತಾರೆ.

ಮಾರೂರಿಗೆ ಪ್ರೌಢಶಾಲೆ ಮಂಜೂರಾತಿ

542 - ಶ್ರೀ ಕೆ. ಸೋಮಪ್ಪ ಸುವರ್ಣ (ಮುಲ್ಕಿ ಮೂಡಬಿದ್ರೆ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾರೂರಿಗೆ ಹೈಸ್ಕೂಲಿನ ಅವಶ್ಯಕತೆಯಿದ್ದು ಮಂಜೂರಾತಿ ನೀಡಲು ಮನವಿಗಳು ಬಂದಿದೆಯೇ?

ಆ) ಈ ವರ್ಷ ಅಲ್ಲಿಯ ಹೈಸ್ಕೂಲಿಗೆ ಮಂಜೂರಾತಿ ನೀಡಲಾಗುವುದೇ?

ಇ) ಅಲ್ಲಿಯ ಮಕ್ಕಳು ಪ್ರೌಢಶಿಕ್ಷಣಕ್ಕಾಗಿ ಆರು ಕಿಲೋಮೀಟರ್‌ಗಿಂತಲೂ ಹೆಚ್ಚಿನ ದೂರ ಶಾಲೆಗೆ ಹೋಗುವ ವಿಚಾರ ಸರಕಾರಕ್ಕೆ ತಿಳಿದಿದೆಯೇ?

ಈ) ಹತ್ತಿರ ಹೈಸ್ಕೂಲ್ಗಳಲ್ಲಿ ಸೀಟು ಸಿಗದೆ ಮಕ್ಕಳು ವಿದ್ಯಾಭ್ಯಾಸ ನಿಲ್ಲಿಸಬೇಕಾದ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ) ಹೌದು.

ಆ) 1994-95ನೇ ಸಾಲಿನಲ್ಲಿ ಪರಿಶೀಲಿಸಲಾಗುವುದು.

ಇ) ಇಲ್ಲ.

ಈ) ಇಲ್ಲ.

ಸಂತ್ರಸ್ತ ಮೀನುಗಾರರಿಗೆ ಮೀನುಗಾರಿಕೆ ಜೆಟ್ಟಿ ನಿರ್ಮಾಣ

497 - ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್): ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನವ ಮಂಗಳೂರು ಬಂದರು ನಿರ್ಮಾಣ ಹಂತದಲ್ಲಿ ಸಂತ್ರಸ್ಥ ಮೀನುಗಾರರಿಗೆ ಬಂದರು ಪ್ರದೇಶದ ವ್ಯಾಪ್ತಿಯಲ್ಲಿ ಮೀನುಗಾರಿಕೆ ಜೆಟ್ಟಿ ನಿರ್ಮಿಸಲು ಆಶ್ವಾಸನೆ ನೀಡಲಾಗಿದೆಯೇ?

ಆ) ಈ ಜೆಟ್ಟಿ ನಿರ್ಮಾಣಕ್ಕಾಗಿ ಸರ್ಕಾರ ಈವರೆಗೆ ಕೈಗೊಂಡ ಕ್ರಮಗಳೇನು?

ಇ) ಸಂತ್ರಸ್ಥ ಮೀನುಗಾರರಿಗೆ ಅನುಕೂಲ ಮಾಡಿಕೊಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ವಸಂತ ವಿ. ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):

ಅ) ಹೌದು.